

ರಣಮೌನ ಮುರಿದು ಎಲ್ಲರ ನೇರ ಆಕ್ರೋಶಕ್ಕೆ ತುತ್ತಾಗಿದ್ದ ಇವನೊಂದು ತಮಾಷೆಯ ವಸ್ತುವಾಗಿದ್ದ. ಇವನೊಬ್ಬ ದಂತವೈದ್ಯನೆಂದು ನನ್ನ ಸ್ನೇಹಿತ ಕುಟ್ರ, ಮಿಂಚಿನಂತೆ ಮಾಹಿತಿ ಸಂಗ್ರಹಿಸಿ ತಂದ. ಫೊಟೋಗ್ರಫಿಯನ್ನು ಕೊಂಚವೂ ಇಷ್ಟಪಡದ ಗೆಳೆಯ ಕುಟ್ರಯನ್ನು ಈ ದಿನ ಬಲವಂತದಿಂದ ನಾವು ಎಳೆದು ತಂದಿದ್ದೆವು. ಅವನಿಗೂ ನಮ್ಮ ಚಟುವಟಿಕೆಗಳು ಬೋರು ಹೊಡೆಸಿದ್ದವು. 'ಬಸ್ಸಿದ್ರೆ ಹತ್ಕೊಂಡು ಓಡೋಗ್ತಿದ್ದೆ. ಯಪ್ಪಾ! ತಿರುಗಿ ಹೋಗಲಾರಂಥ ಕಾಡಿಗೆ ಕರ್ಕೊಂಡು ಬಂದು ಸಿಗಾ ಹಾಕೀರಲ್ರೋ! ಮನೆಮುರುಕ್ರಾ' ಎಂದು ಕುಟ್ರ ಬೈತಾನೆ ಇದ್ದ.

ಹಕ್ಕಿ ದನಿಯಲ್ಲಾಗಲೀ, ಅದರ ಹಾರಾಟ ಹೊಯ್ದಾಟಗಳಲ್ಲೇ ಆಗಲೀ, ಯಾವ ತರಹದ ಸತ್ವವನ್ನೂ ಕಾಣದ ಕುಟ್ರಗೆ ತಮಾಷೆಗೊಬ್ಬ ವಿಚಿತ್ರದ ವ್ಯಕ್ತಿ ಕಂಡಿದ್ದ. ಇಂತಹ ವ್ಯತಿರಿಕ್ತ ಸ್ವಭಾವದ ವ್ಯಕ್ತಿಗಳ ಕಂಡರೆ ಕುಟ್ರಗೆ ಬಲು ಇಷ್ಟ. ತೀರಾ ಬೋರಾಗಿದ್ದ ಕಾಡಿನಲ್ಲಿ ಇಂಥದ್ದೊಂದು ಮನರಂಜನೆ ಸಿಕ್ಕಾಗ ಸುಲಭಕ್ಕೆ ಬಿಡುವ ಪೈಕಿ ಇವನಲ್ಲ. 'ಇವನನ್ನು ನಾನ್ ಬೆಳಗ್ಗೆಯಿಂದನೂ ಅಬ್ಸರ್ವ್ ಮಾಡ್ತಿದ್ದೀನಿ. ತಲೆಬ್ಯಾನಿ ತಿಕ್ಕಲ ಕಂಡ್ರಿ. ನಿಮ್ ಸುಡುಗಾಡು ಹಕ್ಕಿ ಜಗ್ಗೀ ಎಲ್ಲಿ ಬೇಕಲ್ಲಿ ಸಿಕ್ತಾವೆ. ಆದ್ರಿಂಥ ಒರಿಜಿನಲ್ ಕ್ಯಾರೆಕ್ಟರ್ ಹುಡುಕಾಡಿದ್ರೂ ಸಿಗಾಂಗಿಲ್ಲ. ನೀವು ನನ್ನ ಬಿಟ್ ಬಿಡ್ರಪ್ಪ. ನಿಮ್ ದಂಧೆ ನೀವು ಮಾಡ್ರಿ. ನಾನು ಇವುನ ನೋಡಿ ಮಜಾ ತಗೋತೀನಿ. ಏನ್ ಮೆಂಟಲ್ ಟ್ಯಾಂಕಿ ಅದಾನೋ ಇವ್ನು' ಎಂದು ಆ ವೈದ್ಯನ ನೋಡಿ ಪುಸುಪುಸನೆ ನಗತೊಡಗಿದ. ಕುಟ್ರಯ ಒಂದು ಸಮಸ್ಯೆ ಎಂದರೆ ಇವನ ನಗು ತಕ್ಷಣಕ್ಕೆ ನಿಲ್ಲುವುದಿಲ್ಲ. ಮತ್ತೆ ಮತ್ತೆ ನೆನಪು ಮಾಡಿ ನೆಗೆನೆಗೆದು ನಗುವುದಲ್ಲದೆ ನಮ್ಮನ್ನೂ ತಿವಿದು ಹಲ್ಲು ಕಿರಿವಂತೆ ಮಾಡುತ್ತಾನೆ. ಎದುರಾಳಿ ಆಕ್ರೋಶಗೊಂಡು ನಾಲ್ಕು ತದುಕಿದರೆ ನಕ್ಕು ಸಿಕ್ಕಿ ಬಿದ್ದ ನಮಗೆ ಗೂಸಾ ಬೀಳಬೇಕೇ ಹೊರತು, ಕಿಡಿ ಹಚ್ಚಿ ಅತ್ತಮುಖ ತಿರುವಿದ ಇವನಿಗೆ ಖಂಡಿತಾ ಬೀಳುವುದಿಲ್ಲ.

ಹಂಗಿಸುವ ನಮ್ಮ ನಗು ವ್ಯಂಗ್ಯವಾಗಿ ತಾಕಿ ವೈದ್ಯ ಮತ್ತಷ್ಟು ಉಗ್ರಗೊಳ್ಳುತ್ತಿದ್ದ. ವೈದ್ಯನ ತಾಪಮಾನ ಏರುವಂತೆ ಕುಟ್ರಯೂ ರೇಗಿಸುವಂತೆ ನಟಿಸುತ್ತಿದ್ದ. ವೈದ್ಯ ಹನಿಮೂನಿಗೆ ನವ ಪತ್ನಿಯ ಕರೆತಂದವನಾಗಿದ್ದ. ದೂರದಲ್ಲಿ ತನಗೂ ಇವನಿಗೂ ಸಂಬಂಧವೇ ಇಲ್ಲದಂತೆ ತಣ್ಣಗೆ ಕೂತಿದ್ದ ಆಕೆ ಪಶ್ಚಾತ್ತಾಪದ ಭಾವದಲ್ಲೇ ಎಲ್ಲವನ್ನೂ ಗಮನಿಸುತ್ತಿದ್ದಳು. ಆಕೆಯ ಜೊತೆಗೂ ಈಗಾಗಲೇ ದಂತವೈದ್ಯ ಕ್ಯಾತೆ ಜಗಳ ಪೂರೈಸಿರಬೇಕು. ಯಾವುದಕ್ಕೂ ಪ್ರತಿಕ್ರಿಯಿಸದೆ ಭಾರವಾದ ಕಂಗಳಿಂದ ನೋಡುತ್ತಿದ್ದ ಸಂಗಾತಿ